## ಸಕಾಲ ಸೇವೆಗಳು:

ಸಕಾಲ ಸೇವೆಯಡಿ ಸಂಸ್ಥೆಯು 06 ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುತ್ತಿದ್ದು, ಸದರಿ ಸೇವೆಗಳ ವಿವರ, ನಿಗದಿಪಡಿಸಿದ ಅವಧಿ, ಇತ್ಯಾದಿ ವಿವರಗಳನ್ನು ಅನುಬಂಧ-10 ರಂತೆ ಲಗತ್ತಿಸಿದೆ.

### ಅನುಬಂಧ-10

### ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ: ಕಲಬುರಗಿ

| ಕ್ರ. ಸ | ಸೇವೆಗಳ ಪಟ್ಟಿ | ಹೆಸರಿಸಲಾದ ಆಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತು ಮಾಡಿದ ಕಾಲ | ಸಕ್ಷಮ ಅಧಿಕಾರಿ | ಸಕ್ಷಮ ಅಧಿಕಾರಿಯು ವಿಲೇ ಮಾಡುವುದಕ್ಕೆ ಕಾಲಮಿತಿ | ಮೇಲ್ಮನವಿ ಪ್ರಾಧಿಕಾರ | ಮೇಲ್ಮನವಿ ಪ್ರಾಧಿಕಾರಿಯು ವಿಲೇ ಮಾಡುವುದಕ್ಕೆ ಕಾಲಮಿತಿ |
|---|---|---|---|---|---|---|---|
| 1 | ಶಾಲಾ ಮಕ್ಕಳಿಗೆ ಬಸ್ ಪಾಸ್ | ಡಿಪೂ ಮ್ಯಾನೇಜರ್ | 7 ಕೆಲಸದ ದಿನ * | ವಿಭಾಗೀಯ ಸಂಚಾರ ಅಧಿಕಾರಿ | 15 ಕೆಲಸದ ದಿನಗಳು | ವಿಭಾಗದ ವಿಭಾಗೀಯ ನಿಯಂತ್ರಕರು | 7 ಕೆಲಸದ ದಿನಗಳು |
| 2 | ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸ್ | ವಿಭಾಗೀಯ ಸಂಚಾರ ಅಧಿಕಾರಿ | 15 ಕೆಲಸದ ದಿನ ** | ವಿಭಾಗದ ವಿಭಾಗೀಯ ನಿಯಂತ್ರಕರು | 15 ಕೆಲಸದ ದಿನಗಳು | ಮುಖ್ಯ ಸಂಚಾರ ವ್ಯವಸ್ಥಾಪಕರು ಕೇಂದ್ರ ಕಛೇರಿ | 7 ಕೆಲಸದ ದಿನಗಳು |
| 3 | ವಿಕಲ ಚೇತನ ವ್ಯಕ್ತಿಗಳಿಗೆ ರಿಯಾಯಿತಿ ಬಸ್ ಪಾಸ್ | ವಿಭಾಗೀಯ ಸಂಚಾರ ಅಧಿಕಾರಿ | 15 ಕೆಲಸದ ದಿನ *** | ವಿಭಾಗದ ವಿಭಾಗೀಯ ನಿಯಂತ್ರಕರು | 15 ಕೆಲಸದ ದಿನಗಳು | ಮುಖ್ಯ ಸಂಚಾರ ವ್ಯವಸ್ಥಾಪಕರು ಕೇಂದ್ರ ಕಛೇರಿ | 7 ಕೆಲಸದ ದಿನಗಳು |
| 4 | ಅಪಘಾತ ಪರಿಹಾರ | ವಿಭಾಗೀಯ ಸಂಚಾರ ಅಧಿಕಾರಿ | 30 ಕೆಲಸದ ದಿನ | ವಿಭಾಗದ ವಿಭಾಗೀಯ ನಿಯಂತ್ರಕರು | 30 ಕೆಲಸದ ದಿನ | ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾರ್ಯದರ್ಶಿ ಎಆರ್ಎಫ್) ಕೇಂದ್ರ ಕಛೇರಿ | 30 ಕೆಲಸದ ದಿನಗಳು |

| | | | | | | | |
|---|---|---|---|---|---|---|---|
| 5 | ಅಂಧರ ಉಚಿತ ಬಸ್‌ಪಾಸ | ವಿಭಾಗೀಯ ಸಂಚಾರ ಅಧಿಕಾರಿ | 15 ಕೆಲಸದ ದಿನ **** | ವಿಭಾಗದ ವಿಭಾಗೀಯ ನಿಯಂತ್ರಕರು | 15 ಕೆಲಸದ ದಿನಗಳು | ಮುಖ್ಯ ಸಂಚಾರ ವ್ಯವಸ್ಥಾಪಕರು ಕೇಂದ್ರ ಕಛೇರಿ | 7 ಕೆಲಸದ ದಿನಗಳು |
| 6 | ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರಿಗೆ ವಿತರಿಸುವ ಕೂಪನ್ | ವಿಭಾಗೀಯ ಸಂಚಾರ ಅಧಿಕಾರಿ | 15 ಕೆಲಸದ ದಿನ ***** | ವಿಭಾಗದ ವಿಭಾಗೀಯ ನಿಯಂತ್ರಕರು | 15 ಕೆಲಸದ ದಿನಗಳು | ಮುಖ್ಯ ಸಂಚಾರ ವ್ಯವಸ್ಥಾಪಕರು ಕೇಂದ್ರ ಕಛೇರಿ | 7 ಕೆಲಸದ ದಿನಗಳು |

ಟಿಪ್ಪಣಿ * ವಿದ್ಯಾರ್ಥಿಯು ವಿನಾಯಿತಿ ಬಸ್ ಪಾಸ್ ಅರ್ಜಿಯನ್ನು ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಅವರು ತದನಂತರ ಸದರಿ ಕಾರ್ಯಕ್ಷೇತ್ರದ ಡಿಪೊ ಮ್ಯಾನೇಜರ್ ರವರಿಗೆ ಕಳುಹಿಸತಕ್ಕದ್ದು. ಡಿಪೋ ಮ್ಯಾನೇಜರ್‌ರವರು, ಸಂಸ್ಥೆಯ ಮುಖ್ಯಸ್ಥರಿಗೆ 7 ದಿನಗಳೊಳಗೆ ಪಾಸನ್ನು ನೀಡುವುರು.

** ಸ್ವಾತಂತ್ರ್ಯ ಹೋರಾಟಗಾರರು ಉಚಿತ ಬಸ್ ಪಾಸ್‌ಗಾಗಿ ತನ್ನ ಕಾರ್ಯಕ್ಷೇತ್ರದ ಡೆಪ್ಯೂಟಿ ಕಮಿಷನರ್‌ರವರಿಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು, ಡೆಪ್ಯೂಟಿ ಕಮಿಷನರ್ ಉಚಿತ ಬಸ್ ಪಾಸ್ ನೀಡುವುದಕ್ಕಾಗಿ ಆದೇಶವನ್ನು ಹೊರಡಿಸುವರು. ವಿಭಾಗೀಯ ಸಂಚಾರಿ ಅಧಿಕಾರಿಯು ಉಚಿತ ಬಸ್ ಪಾಸನ್ನು ನೀಡುವರು.

*** ವಿಕಲಚೇತನ ವ್ಯಕ್ತಿಗಳಿಂದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗೆ ಸಂಬಂಧಪಟ್ಟ ವಿಭಾಗೀಯ ಸಂಚಾರಿ ಅಧಿಕಾರಿಯವರು ವಿಕಲಚೇತನ ವ್ಯಕ್ತಿಗಳಿಗೆ ರಿಯಾಯಿತಿ ಪಾಸನ್ನು ನೀಡುವರು.

**** ಪೂರ್ಣ ಅಂಧರರಿಂದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗೆ ಸಂಬಂಧಪಟ್ಟ ವಿಭಾಗೀಯ ಸಂಚಾರಿ ಅಧಿಕಾರಿಯವರು ಅಂಧರಿಗೆ ರಿಯಾಯಿತಿ ಪಾಸನ್ನು ನೀಡುವರು.

***** ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರು ರೂ.2000/- ಮೌಲ್ಯದ ಉಚಿತ ಕೂಪನ್‌ಗಾಗಿ ತನ್ನ ಕಾರ್ಯಕ್ಷೇತ್ರದ ಡೆಪ್ಯೂಟಿ ಕಮಿಷನರ್‌ರವರಿಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು, ಡೆಪ್ಯೂಟಿ ಕಮಿಷನರ್ ಉಚಿತ ಕೂಪನ್ ನೀಡುವುದಕ್ಕಾಗಿ ಆದೇಶವನ್ನು ಹೊರಡಿಸುವರು. ವಿಭಾಗೀಯ ಸಂಚಾರಿ ಅಧಿಕಾರಿಯು ರೂ. 2000/- ಮೌಲ್ಯದ ಉಚಿತ ಬಸ್ ಕೂಪನ್‌ಗಳನ್ನು ನೀಡುವರು.